# ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ

## ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ

## ದಕ್ಷಿಣ ಕನ್ನಡ ಜಿಲ್ಲೆಯ ಕೃಷಿ ಹವಾಮಾನ ಸಲಹಾ ಸೂಚಕ

(ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಹಾಗೂ ಗ್ರಾಮೀಣ ಕೃಷಿ ಹವಾಮಾನ ಸೇವಾ ಯೋಜನೆ, ಬ್ರಹ್ಮಾವರ–576213, ಉಡುಪಿ ಜಿಲ್ಲೆ ಕರ್ನಾಟಕ ಇವರ ಜಂಟಿ ಪ್ರಸಾರ)

**ಹವಾಮಾನ ಮುನ್ಸೂಚನೆಯ ಅವಧಿ 19-10-2022 ರಿಂದ 23-10-2022**

ಸಂ. ಗ್ರಾ.ಕೃ.ಹ.ಸೇ.ಬ/079/2022 ದಿನಾಂಕ: 18.10.2022

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು, ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಮುಂದಿನ ಐದು ದಿನಗಳು ದಿನಾಂಕ 19-10-2022 ರಿಂದ 23-10-2022 ರ ವರೆಗೆ ಲಭ್ಯವಿರುವ ಹವಾಮಾನ ಮುನ್ಸೂಚನೆ ಈ ಕೆಳಕಂಡಂತೆ ನೀಡಿರುತ್ತಾರೆ

| ಹವಾಮಾನದ ಅಂಶಗಳು | ಕ್ರೋಢೀಕರಿಸಿದ ಹವಾಮಾನ ಮುನ್ಸೂಚನೆ | | | | | ಹಿಂದಿನ ವಾರದ ಹವಾಮಾನ ಪರಿಸ್ಥಿತಿಯ ಒಟ್ಟು/ಸರಾಸರಿ | ಮುಂದಿನ ಐದು ದಿನಗಳ ಹವಾಮಾನ ಮುನ್ಸೂಚನೆಯ ಒಟ್ಟು/ಸರಾಸರಿ |
|---|---|---|---|---|---|---|---|
| | ದಿನ–1 (19.10.2022) | ದಿನ–2 (20.10.2022) | ದಿನ–3 (21.10.2022) | ದಿನ–4 (22.10.2022) | ದಿನ–5 23.10.2022) | | |
| ಮಳೆ ಪ್ರಮಾಣ (ಮಿ.ಮೀ.) | 15 | 14 | 23 | 10 | 22 | 29.6 | 84↑ |
| ಗರಿಷ್ಠ ಉಷ್ಣಾಂಶ (°C) | 32 | 33 | 33 | 33 | 32 | 31.0 | 33↑ |
| ಕನಿಷ್ಠ ಉಷ್ಣಾಂಶ (°C) | 22 | 22 | 23 | 22 | 22 | 22.9 | 22↓ |
| ಮೋಡದ ಹೊದಿಕೆ (ಒಕ್ಟಾ) | 8 | 7 | 6 | 7 | 7 | 6 | 7↑ |
| ಗರಿಷ್ಠ ಆರ್ದ್ರತೆ (ಶೇ.) | 97 | 96 | 96 | 93 | 94 | 90.2 | 95.2↑ |
| ಕನಿಷ್ಠ ಆರ್ದ್ರತೆ (ಶೇ.) | 72 | 66 | 62 | 55 | 52 | 71 | 61.4↓ |
| ಗಾಳಿಯ ವೇಗ (Kmph) | 4 | 4 | 4 | 5 | 4 | 5.4 | 4↓ |
| ಗಾಳಿಯ ದಿಕ್ಕು (°) | 158 | 292 | 72 | 109 | 79 | 264 | 142↓ |
| ಮುನ್ಸೂಚನೆ | TSH | TSH | NIL | TSH | TSH | | |
| ಸಂಭವನೀಯತೆ (%) | >50- ≤75% | >50- ≤75% | >50- ≤75% | >50- ≤75% | >50- ≤75% | | |

**ಭಾರತ ಹವಾಮಾನ ಇಲಾಖೆ, ನವದೆಹಲಿ ಮತ್ತು ರಾಜ್ಯ ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ವಿಸ್ತೃತ ಮಳೆ ಮುನ್ಸೂಚನೆಯ ಪ್ರಕಾರ ಕರ್ನಾಟಕದ ಕರಾವಳಿ ತೀರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗೆ ದಿನಾಂಕ 23.10.2022 ರಿಂದ 29.10.2022 ರವರೆಗೆ ವಾಡಿಕೆ ಮಳೆಯಾಗುವ ಸಂಭವವಿದೆ.**

### ಹವಾಮಾನ ಪರಿಸ್ಥಿತಿ ಮತ್ತು ಮುನ್ಸೂಚನೆ ಸಾರಾಂಶ

ಭಾರತೀಯ ಹವಾಮಾನ ಇಲಾಖೆ ಪುಣೆ ಮತ್ತು ಬೆಂಗಳೂರು ಇವರು, ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಮುನ್ಸೂಚನೆಯ ಪ್ರಕಾರ, **ಮುಂದಿನ ಐದು ದಿನಗಳಲ್ಲಿ ಮೋಡಕವಿದ ವಾತಾವರಣವಿರಲಿದ್ದು ಗುಡುಗು–ಮಿಂಚು ಸಹಿತ ಜಿಲ್ಲೆಯಾದ್ಯಂತ, ಹಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.** ಮುಂದಿನ ಐದು ದಿನಗಳಲ್ಲಿ ಗರಿಷ್ಠ ತಾಪಮಾನವು **32-33°C** ಇರುತ್ತದೆ ಮತ್ತು ಕನಿಷ್ಠ ತಾಪಮಾನವು **22-23°C** ಇರುತ್ತದೆ. ಸರಾಸರಿ ಸಾಪೇಕ್ಷ ಆದ್ರತೆಯು ಬೆಳಗಿನ ಸಮಯದಲ್ಲಿ **93%** ರಿಂದ **97%** ರಷು ಇರುತ್ತದೆ. ಹಾಗೂ ಮಧ್ಯಾಹ್ನದ ಸಮಯದಲ್ಲಿ **52%** ರಿಂದ **72%** ರಷ್ಟು ಇರುತ್ತದೆ. ಸರಾಸರಿ ಗಾಳಿಯ ವೇಗವು **4-5** ಕೀ.ಮೀ. ಪ್ರತಿ ಘ,ವೇಗದಲ್ಲಿ ಬೀಸಲಿದೆ. ಈ ಹವಾಮಾನ ಪರಿಸ್ಥಿತಿಯನ್ನು ಪರಿಗಣಿಸಿದರೆ, ರೈತರು ಈ ಕೆಳಕಂಡ ಕೃಷಿ ಸಲಹೆಗಳನ್ನು ಅನುಸರಿಸುವಂತೆ ಸಲಹೆ ನೀಡಲಾಗಿದೆ.


**Mobile Applications developed by India Meteorological Department for the benefit of Farming Community Farmers are suggested to download the app using below links**

| | Mausam: | Meghdoot: | Damini: |
|---|---|---|---|
| Andriod: | https://play.google.com/store/apps/details?id=com.imd.masuam | https://play.google.com/store/apps/details?id=com.aas.meghdoot | https://play.google.com/store/apps/details?id=com.lightening.live.damini |
| Apple OS: | https://apps.apple.com/us/app/id1522893967 | https://apps.apple.com/in/app/meghdoot/id1474048155 | https://apps.apple.com/app/id1502385645 |

**Decadal Rainfall (mm) Comparison:**

| Year | 30 years Mean | 2011 | 2012 | 2013 | 2014 | 2015 | 2016 | 2017 | 2018 | 2019 | 2020 | 2021 | 2022 |
|---|---|---|---|---|---|---|---|---|---|---|---|---|---|
| Rainfall | 3790.4 | 3628.1 | 2984.2 | 3325.3 | 2816.3 | 2383.4 | 2827.1 | 3000 | 3381.2 | 4118.4 | 4110.8 | 4110.8 | 3448.9 |
| Rainy days | 110 | 128 | 105 | 127 | 112 | 107 | 119 | 121 | 112 | 123 | 126 | 152 | 111 |


Realised Rainfall (06th Octo to 12th Octo, 2022)




Rainfall Forecast Map (14th Octo to 20th Octo 2022)




Standardized Precipitation Index Outlook (08.09.2022 to 05.10.2022)



Normalized Difference Vegetation Index



# ದಕ್ಷಿಣ ಕನ್ನಡ ಜಿಲ್ಲೆಗೆ ನೀಡಿದ ಹವಾಮಾನ ಮುನ್ಸೂಚನೆ ಆಧಾರಿಸಿ ನೀಡಿದ ಕೃಷಿ ಸಲಹೆಗಳು

## ತೋಟಗಾರಿಕೆ ಬೆಳೆಗಳು:

| | |
|---|---|
| ಸಾಮಾನ್ಯ ಸಲಹೆ | ➢ ರೈತರು ಮತ್ತು ಸಾರ್ವಜನಿಕರು ಹವಾಮಾನ ಮುನ್ಸೂಚನೆ ಮತ್ತು ಬೆಳೆ ಸಲಹೆಯ ಮಾಹಿತಿ ಪಡೆಯಲು ಮೇಘದೂತ್ ಆ್ಯಪ್‌ನ್ನು ಡೌನ್ಲೋಡ್ ಮಾಡಿಕೊಳ್ಳುವುದು ಹಾಗೂ ಗುಡುಗು ಮತ್ತು ಮಿಂಚಿನ ಮಾಹಿತಿ ತಿಳಿಯಲು ದಾಮಿನಿ ಆ್ಯಪ್ ಅನ್ನು ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ. |
| ಅಡಿಕೆ<br>(ಪೋಷಕಾಂಶ ನಿರ್ವಹಣೆ) | ➢ ರೈತರು ಗೊಬ್ಬರ (100ಗ್ರಾಂ:40ಗ್ರಾಂ:140ಗ್ರಾಂ ಸಾರಜನಕ/ರಂಜಕ/ಪೊಟ್ಯಾಷ್ ಪ್ರತಿ ಮರಕ್ಕೆ) ಹಾಕಲು ಸೂಕ್ತ ಸಮಯ ಹಾಗೂ ರೈತರು ಕೊಟ್ಟಿಗೆ ಗೊಬ್ಬರ (10 ಕಿ.ಗ್ರಾಂ/ಮರಕ್ಕೆ) ಅಥವಾ ಎರೆಹುಳು ಗೊಬ್ಬರ (3ಕಿ.ಗ್ರಾಂ /ಮರಕ್ಕೆ) ಹಾಕಬಹುದಾಗಿದೆ. |
| ಗೇರು–(ಕಾಂಡಕೊರಕ)<br> | ➢ ಬಾಧಿತ ಭಾಗವನ್ನು ಸ್ವಚ್ಛಗೊಳಿಸಿ ನಂತರ ಆ ಭಾಗವನ್ನು ಮರಳು ಮಿಶ್ರಿತ ಕ್ಲೋರೋಫೈರಿಫಾಸ್ 4ಜಿ ಅಥವಾ 10ಜಿ ಹರಳುಗಳಿಂದ ಮುಚ್ಚುವುದು. |
| ತೆಂಗು<br>(ರೈನೋಸೊರೆಸ್ ದುಂಬಿ)<br> | ➢ ಗೊಬ್ಬರದ ಹೊಂಡದಿಂದ ಗೊಬ್ಬರವನ್ನು ಎತ್ತಿದಾಗಲೆಲ್ಲಾ (ಕೀಟಗಳು ಸಂತಾನೋತ್ಪತ್ತಿ ಮಾಡುವ ಸ್ಥಳ) ಜೀರುಂಡೆಯ ವಿವಿಧ ಹಂತಗಳನ್ನು ಸಂಗ್ರಹಿಸಿ ನಾಶಮಾಡಬೇಕು.<br>➢ ಕೀಟಗಳ ಶಾಶ್ವತೆಯನ್ನು ಪರೀಕ್ಷಿಸಲು ಗೊಬ್ಬರದ ಹೊಂಡಗಳಲ್ಲಿ ಎಂಟೋಮೊಪಾಥೋಜೆನ್ ಅಂದರೆ ಶಿಲೀಂಧ್ರವನ್ನು (ಮೆಟಾರ್ಹಿಜಿಯಂ ಅನಿಸೊಪ್ಲಿಯಾ) ಸೇರಿಸುವುದು.<br>➢ ಪ್ರತಿ ಕಟಾವಿನಲ್ಲಿ ಮರದ ಸುಳಿಗಳನ್ನು ಪರೀಕ್ಷಿಸಿ ಮತ್ತು ದೊಡ್ಡ ಜೀರುಂಡೆಗಳನ್ನು ಹೊರತೆಗೆದು ಕೊಲ್ಲುವುದು.<br>➢ ಸುಳಿಯಲ್ಲಿರುವ ಎಲೆಗಳಲ್ಲಿ ಒಳಗಿನ ಮೂರು ಎಲೆಗಳ ತಳದಲ್ಲಿ ಕ್ಲೋರೋಫೈರಿಫಾಸ್ 10ಉ+ಮರಳು (1:2) ಪ್ರತಿ ಮರಕ್ಕೆ 150 ಗ್ರಾಂ ನಂತೆ ಸೇರಿಸುವುದು.<br>➢ ರಂಧ್ರಗಳಿರುವ ಸಣ್ಣ ಪ್ಲಾಸ್ಟಿಕ್ ಚೀಲಗಳಲ್ಲಿ ಕ್ಲೋರೋಫೈರಿಫಾಸ್ 10ಉ. 5 ಗ್ರಾಂ ನ್ನು ಹಾಕಿ ಎರಡು ಒಳಗಿನ ಎಲೆಯ ಅಕ್ಷಗಳಲ್ಲಿ ಇರಿಸುವುದು. ಪ್ರತೀ 25–30 ದಿನಗಳಿಗೊವ್ಮೆ ಬದಲಾಯಿಸುತ್ತಿರುವುದು. |
| ತೆಂಗು<br>(ಕಾಂಡ ಸೋರುವ ರೋಗ)<br> | ಬಾಧಿತ ಭಾಗವನ್ನು ಸ್ವಚ್ಛಗೊಳಿಸಿ ನಂತರ ಆ ಭಾಗವನ್ನು 10% ಬೋರ್ಡೋ ಪೇಸ್ಟ್‌ನ್ನು ಹಚ್ಚುವುದು ಅಥವಾ 100ಮಿ.ಲೀ ನೀರಿಗೆ 8–10 ಗ್ರಾಂ. ಬ್ಲೈಟಾಕ್ಸ್ ನ್ನು ಮಿಶ್ರಿಸಿ ಬುಡಕ್ಕೆ ಹಾಕುವುದು ಅಥವಾ 2ಮಿ.ಲೀ ಹೆಕ್ಸಾಕೊನೊಜೋಲ್‌ನ್ನು ಪ್ರತಿ ಲೀಟರ್ ನೀರಿನಲ್ಲಿ ಮಿಶ್ರಿಸಿ ಬುಡಕ್ಕೆ ಹಾಕುವುದು (ಪ್ರತಿ ಮರಕ್ಕೆ 8–10ಲೀಟರ್) |
| ತೆಂಗು<br>(ಪೋಷಕಾಂಶ ನಿರ್ವಹಣೆ) | ➢ ರೈತರು ಗೊಬ್ಬರ (330ಗ್ರಾಂ:200ಗ್ರಾಂ:800ಗ್ರಾಂ ಸಾರಜನಕ/ರಂಜಕ/ಪೊಟ್ಯಾಷ್ ಪ್ರತಿ ಮರಕ್ಕೆ) ಹಾಕಲು ಸೂಕ್ತ ಸಮಯ ಹಾಗೂ ರೈತರು ಕೊಟ್ಟಿಗೆ ಗೊಬ್ಬರ (25 ಕಿ.ಗ್ರಾಂ/ಮರಕ್ಕೆ) ಅಥವಾ ಕಾಂಪೋಸ್ಟ್ (50 ಕಿ.ಗ್ರಾಂ/ಮರಕ್ಕೆ) ಹಾಕಬಹುದಾಗಿದೆ. |
| ಬಾಳೆ<br>(ಕಂದು ನಾಟಿ ಮಾಡಲು) | ಬಾಳೆ ನಾಟಿ ಮಾಡಲು ಸಮಯ ಸೂಕ್ತವಾಗಿದ್ದು 1.8 X1.8 ಮೀಟರ್ (ಪಚ್ಚಬಾಳೆ) 3,086 ಗುಣಿಗಳು ಪ್ರತಿ ಹೇಕ್ಟರ್‌ಗೆ ಅಥವಾ (ರೋಬಾಸ್ಟ್) 2.2 X1.8 ಮೀಟರ್ 2,250 ಗುಣಿಗಳು ಪ್ರತಿ ಹೇಕ್ಟರ್‌ಗೆ) ಅಂತರದಲ್ಲಿ ಗುಣಿಗನ್ನು ತೆಗೆಯಬೇಕು. ಭೂಮಿಯನ್ನು 3 ಬಾರಿ ಉಳುಮೆ ಮಾಡಿ ಹದಮಾಡಿಟ್ಟುಕೊಳ್ಳಬೇಕು. ನಂತರ ಮೇಲೆ ಶಿಫಾರಸ್ಸು ಮಾಡಿದ ಅಂತರದಲ್ಲಿ 45X45X45 ಸೆಂ.ಮೀ ಇರುವ ಗುಣಿಗಳನ್ನು ತೆಗೆಯಬೇಕು. ಈ ಗುಣಿಗಳಲ್ಲಿ ಸಮಪ್ರಮಾಣದಲ್ಲಿ ಬೆರೆಸಿದ ಕೊಟ್ಟಿಗೆ ಗೊಬ್ಬರ/ ಕಾಂಪೋಸ್ಟ್ ಮೇಲ್ಮಣ್ಣಿನ ಮಿಶ್ರಣ ತುಂಬಬೇಕು. |
| ಬಾಳೆ<br>(ಸಾಮಾನ್ಯ ಸಲಹೆ) | ➢ 5 ತಿಂಗಳ ನಂತರ ಪ್ರತಿ ಲೀಟರ್ ನೀರಿಗೆ 5ಗ್ರಾಂ. ಬನಾನ ಸ್ಪೆಷಲ್(ಲಘು ಪೋಷಕಾಂಶ) ಮಿಶ್ರಿಸಿ ಸಿಂಪಡಿಸುವುದು. (15ಲೀ. ಸ್ಪ್ರೇಯರ್‌ಗೆ ಒಂದು ನಿಂಬೆ ಹಣ್ಣು ಹಾಗೂ ಒಂದು ಶಾಂಪೂವನ್ನು ಬೆರೆಸಬೇಕು)<br>➢ ಬಾಳೆ ಬೆಳೆಯಲ್ಲಿ ಉತ್ತಮ ಗುಣಮಟ್ಟ ಹಾಗೂ ಅಧಿಕ ಇಳುವರಿ ಪಡೆಯಲು ಪ್ರತಿ ಬಾಳೆಗೊನೆಗೆ 10ಗ್ರಾಂ. ಯುರಿಯಾ+10ಗ್ರಾಂ. ಪೊಟ್ಯಾಷಿಯಂ ಸಲ್ಫೇಟ್+0.5ಕಿ.ಗ್ರಾ. ಹಸಿ ಸಗಣಿಯನ್ನು 100ಮಿ.ಲೀ ನೀರಿಗೆ ಬೆರೆಸಿ ಗೊನೆಯ ತುದಿಗೆ ಕಟ್ಟುವುದು. |
| ಮಲ್ಲಿಗೆ<br>(ಎಲೆಚುಕ್ಕೆ ರೋಗ)<br> | ➢ ರೋಗಕ್ಕೆ ತುತ್ತಾದ ಎಲೆಗಳನ್ನು ಕಿತ್ತು ನಾಶ ಪಡಿಸುವುದು. ನಂತರ ಹತೋಟಿಗಾಗಿ ಹೆಕ್ಸಾಕೊನೊಜೋಲ್ 1ಮಿ.ಲೀ ಅಂತೆ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ. |
| ಕಾಳುಮೆಣಸು<br>(ನಿಧಾನ ಸೊರಗು ರೋಗ) | ಮುಂಜಾಗ್ರತ ಕ್ರಮವಾಗಿ ರೋಗ ಬಂದಿರುವ ಬಳ್ಳಿಗಳ ಎಲೆಗಳನ್ನು ಕಿತ್ತು ನಾಶಪಡಿಸಬೇಕು ಅನಂತರ ಬೇವಿನ ಹಿಂಡಿ ಮಿಶ್ರಿತ ಅಥವಾ ಸಹ್ಯಾದ್ರಿ ತ್ರಿಶೂಲ್ ಮಿಶ್ರಿತ ಕೊಟ್ಟಿಗೆ ಗೊಬ್ಬರವನ್ನು ಬಳ್ಳಿಗಳಿಗೆ ನೀಡಬೇಕು ಅಥವಾ 2ಗ್ರಾಂ ಮೆಟಾಲಾಕ್ಸಿಲ್+ ಮ್ಯಾಂಕೋಜೆಬ್ ಅನ್ನು ಪ್ರತಿ ಲೀಟರ್ ನೀರಿಗೆ ಬೆರಸಿ ನೀರಿಗೆ ಬೆರಸಿ ಬುಡದ ಸುತ್ತ ಹಾಕಬೇಕು ಅಥವಾ ಸಿಂಪಡಿಸುವ್ವದು. |

| | |
|---|---|
| ಕಾಳುಮೆಣಸು (ಸಾಮಾನ್ಯ ಸಲಹೆ) | ಉತ್ತಮ ಇಳುವರಿಯನ್ನು ಪಡೆಯಲು ಪೆಪ್ಪೆರ್ ಸ್ಪೆಷಲ್ ಅನ್ನು 5ಗ್ರಾಂ, ನಂತೆ ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. |
| ಪಪಾಯ (ಬುಡ ಕೊಳೆ ರೋಗ) | ➢ ಎರಡು ಸಾಲುಗಳ ಮಧ್ಯದಲ್ಲಿ 1x1ಅಡಿ ಆಳದ ಬಸಿಗಾಲುವೆಗಳನ್ನು ತೆಗಿಯುವುದು.<br>➢ ನಿರ್ವಹಣೆಗಾಗಿ ಮೆಟಲಾಕ್ಸಿಲ್ + ಮ್ಯಾಂಕೋಜೆಬ್ 2 ಗ್ರಾಂ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪರಣೆ ಮಾಡುವುದು ಮತ್ತು ಬುಡದ ಸುತ್ತ ಸುರಿಯುವುದು. |
| ಭತ್ತ (ಸಾಮಾನ್ಯ ಸಲಹೆ) | ➢ ಅಲ್ಪಾವಧಿ ತಳಿಗಳನ್ನು ಕಟಾವು ಮಾಡಲು ಸೂಕ್ತ ಸಮಯವಾಗಿದೆ |
| ಭತ್ತ (ಗಂಧಿ ತಿಗಣೆ) | ➢ ಗಂಧಿ ತಿಗಣೆ ಕಂಡುಬಂದರೆ ಮೆಲಾಥಿಯನ್ 50ಇ.ಸಿ ಯನ್ನು ಪ್ರತಿ ಲೀಟರ್ ನೀರಿಗೆ 2ಮಿ.ಲೀ ನಂತೆ ಮಿಶ್ರಿಸಿ ಗದ್ದೆಯ ಒಳಭಾಗದಿಂದ ಸಿಂಪಡಿಸಬೇಕು. |
| ಭತ್ತ (ಬೇಸಾಯ ಸಲಹೆ) | ➢ ಭತ್ತದ ಕಟಾವಾದ ನಂತರ ಎರಡನೆ ಬೆಳೆಯಾಗಿ ಉಳಿಕೆ ತೇವಾಂಶದಲ್ಲಿ ದ್ವಿದಳ ಧಾನ್ಯಗಳಾದ ಉದ್ದು, ಹೆಸರು ಅಥವಾ ಅವಡೆ ಬೆಳೆಗಳನ್ನು ಬಿತ್ತನೆ ಮಾಡಲು ಸೂಕ್ತ ಸಮಯವಾತದೆ. |
| ಜಾನುವಾರು–ಹಸು (ಸಾಮಾನ್ಯ ಸಲಹೆ) | ➢ ಜಾನುವಾರುಗಳಿಗೆ ಕಾಲುಬಾಯಿ ಜ್ವರ,ಗಳಲೆರೋಗ,ಚಪ್ಪೆ ರೋಗ,ಕರುಳುಬೇನೆ ರೋಗಗಳ ವಿರುದ್ಧ ಲಸಿಕೆ ಹಾಕಿಸುವುದು. ಹಸುಗಳಲ್ಲಿ ಅತಿಸಾರ (ಭೇಧಿ) ಹಾಗೂ ಹೊಟ್ಟೆಯಲ್ಲಿ ಆಮ್ಲತೆಯನ್ನು ತಡೆಗಟ್ಟಲು ಸಮತೋಲಿತ ಆಹಾರವನ್ನು ನೀಡುವುದು ಸೂಕ್ತ. |

(ಈ ಮೇಲಿನ ಬೆಳೆ ಸಲಹೆಯು ಹವಾಮಾನ ಇಲಾಖೆ, ಬೆಂಗಳೂರು ಇವರು ನೀಡಿರುವ ಹವಾಮಾನ ಮುನ್ಸೂಚನೆಯ ಆಧಾರವಾಗಿದೆ)

ಶ್ರೀ. ಪ್ರವೀಣ್ ಕೆ.ಎಮ್,
ತಾಂತ್ರಿಕ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.

ಡಾ. ಕೆ. ವಿ. ಸುಧೀರ್ ಕಾಮತ್,
ನೊಡಲ್ ಅಧಿಕಾರಿಗಳು,
ಜಿ.ಕೆ.ಎಮ್.ಎಸ್–ವಿಭಾಗ,
ವ.ಕೃ.ತೋ.ಸಂ.ಕೇ–ಬ್ರಹ್ಮಾವರ.